## ಅಯೋಧ್ಯೆ ತೀರ್ಪು ಮರುಪರಿಶೀಲನೆಯ 19 ಅರ್ಜಿ ವಜಾ

# ಮಂದಿರ ಹಾದಿ ಮುಕ್ತ

ದಿ. 13/12/19

**ನವದೆಹಲಿ:** ಅಯೋಧ್ಯೆ ವಿವಾದವನ್ನು ಬಗೆಹರಿಸಿ ನ.9ರಂದು ನೀಡಲಾಗಿದ್ದ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಎಲ್ಲ 19 ಮರುಪರಿಶೀಲನಾ ಅರ್ಜಿಗಳನ್ನು ಸುಪ್ರೀಂಕೋರ್ಟ್ ಗುರುವಾರ ವಜಾ ಮಾಡಿದೆ. ನ್ಯಾಯಮೂರ್ತಿಗಳ ಕೊಠಡಿಯೊಳಗೆ ವಿಚಾರಣೆ ನಡೆಸಿದ ಸಿಜೆಐ ಎಸ್.ಎ.ಬೊಬ್ಡೆ ನೇತೃತ್ವದ ಐವರು ಸದಸ್ಯರ ಪೀಠ ಅರ್ಜಿಗಳಲ್ಲಿ ಯಾವುದೇ ಹುರುಳಿಲ್ಲ ಎಂದು ಅವುಗಳ ವಿಚಾರಣೆ ನಡೆಸಲು ನಿರಾಕರಿಸಿತು.

ಈ ಸಂಕೀರ್ಣ ವಿವಾದದಲ್ಲಿ ಮೂಲ ದಾವೆದಾರರು ಆರಂಭದಲ್ಲಿ ಸಲ್ಲಿಸಿರುವ ಮರುಪರಿಶೀಲನೆ ಅರ್ಜಿಗಳನ್ನಷ್ಟೇ ಪೀಠ ಪರಿಶೀಲಿಸಿತು. ಸಲ್ಲಿಕೆಯಾದ ಒಟ್ಟು 19 ಅರ್ಜಿಗಳ ಪೈಕಿ ಹತ್ತು ಹಿಂದಿನ ವ್ಯಾಜ್ಯದ ದಾವೆದಾರರದ್ದಾದರೆ ಇನ್ನುಳಿದವು 'ಮೂರನೇ ಪಕ್ಷ'ದವರದ್ದಾಗಿದ್ದವು. ಇದರಲ್ಲಿ ಚಿಂತಕರು ಹಾಗೂ ಹೋರಾಟಗಾರರ ಸಹಿತ 40 ಜನರು ಒಟ್ಟಾಗಿ ಸಲ್ಲಿಸಿದ ಅರ್ಜಿಯೂ ಒಂದಾಗಿದೆ. ಮರುಪರಿಶೀಲನೆ ಅರ್ಜಿಗಳು ವಜಾ ಆಗಿರುವುದರಿಂದ ಅವುಗಳನ್ನು ಬಹಿರಂಗ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಬೇಕೆಂಬ ಅರ್ಜಿದಾರರ ಮನವಿಗಳೂ ವಜಾಗೊಂಡಂತಾಗಿದೆ. 10 ಮೂಲ ದಾವೆದಾರರ ಪೈಕಿ ಎಂಟು ಅರ್ಜಿಗಳು ಮುಸ್ಲಿಂ ಪಕ್ಷದವರ ಕಡೆಯಿಂದ ಸಲ್ಲಿಕೆಯಾಗಿದ್ದವು. ಅವರಲ್ಲಿ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಬೆಂಬಲಿತರ ಅರ್ಜಿಗಳೂ ಇದ್ದವು. ಪ್ರಮುಖ ಮುಸ್ಲಿಂ ದಾವೆದಾರರಾಗಿದ್ದ ಉತ್ತರ ಪ್ರದೇಶ ಸುನ್ನಿ ಕೇಂದ್ರೀಯ ವಕ್ಫ್ ಮಂಡಳಿ ತೀರ್ಪಿನ ಮರುಪರಿಶೀಲನೆ ಕೋರಿ ಅರ್ಜಿ ಸಲ್ಲಿಸದಿರುವುದು ವಿಶೇಷ.

**ರಷೀದಿ ವಾದ:** ಮೂಲ ದಾವೆದಾರ ಎಂ. ಸಿದ್ದಿಕ್‌ರ ಕಾನೂನುಬದ್ಧ ಉತ್ತರಾಧಿಕಾರಿ ಮೌಲಾನಾ ಸಯ್ಯದ್ ಅಶ್ಹದ್ ರಷೀದಿ ಡಿ.2ರಂದು ಮೊದಲ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ರಷೀದಿ ಜಾಮಿಯತ್ ಉಲೇಮಾ ಎ ಹಿಂದ್‌ನ ಉತ್ತರ ಪ್ರದೇಶ ಘಟಕದ ಅಧ್ಯಕ್ಷ. ಡಿ.6ರಂದು ಆರು ಅರ್ಜಿಗಳು ಸಲ್ಲಿಕೆಯಾದವು. ಡಿ.9ರಂದು ಅಖಿಲ ಭಾರತ ಹಿಂದು ಮಹಾಸಭಾ ಮತ್ತು 40 ಕಾರ್ಯಕರ್ತರು ಎರಡು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದರು. ಬಾಬರಿ ಮಸೀದಿ ಪುನರ್ ನಿರ್ಮಾಣಕ್ಕೆ ನಿರ್ದೇಶನ ನೀಡುವ ಮೂಲಕ ಮಾತ್ರವೇ 'ಸಂಪೂರ್ಣ ನ್ಯಾಯ' ಒದಗಿಸಬಹುದಾಗಿದೆ ಎಂಬುದು ಮೌಲಾನಾ ರಷೀದಿಯ ವಾದ. ಒಟ್ಟು 14 ಅಂಶಗಳನ್ನು ಅವರು ನಮೂದಿಸಿದ್ದಾರೆ. ಪಂಚಪೀಠದಲ್ಲಿ ಸಿಜೆಐ ಜತೆಗೆ ಡಿ.ವೈ. ಚಂದ್ರಚೂಡ್, ಅಶೋಕ್ ಭೂಷಣ್, ಎಸ್.ಎ. ನಜೀರ್ ಮತ್ತು ಸಂಜೀವ್ ಖನ್ನಾ ಇದ್ದರು.



### ಸುಪ್ರೀಂ ಮಹತ್ವದ ತೀರ್ಪು

ದೀರ್ಘ ಅವಧಿಯ ವಿವಾದದ ಬಗ್ಗೆ ಇದೇ ನ. 9ರಂದು ಅಂದಿನ ಸಿಜೆಐ ರಂಜನ್ ಗೊಗೊಯ್ ನೇತೃತ್ವದ ಪಂಚ ಸದಸ್ಯ ಪೀಠ ತೀರ್ಪು ನೀಡಿ ಅಯೋಧ್ಯೆಯ ವಿವಾದಿತ ಜಾಗದಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಹಾದಿ ಸುಗಮಗೊಳಿಸಿತ್ತು. ಜಾಗವನ್ನು 'ರಾಮ ಲಲ್ಲಾ'ಗೆ ಬಿಟ್ಟುಕೊಟ್ಟು ಮಸೀದಿ ನಿರ್ಮಿಸಲು ಕೇಂದ್ರೀಯ ಸುನ್ನಿ ವಕ್ಫ್ ಮಂಡಳಿಗೆ ಅಯೋಧ್ಯೆಯಲ್ಲಿ ಐದು ಎಕರೆ ಜಮೀನು ನೀಡಬೇಕೆಂದು ಕೋರ್ಟ್ ನಿರ್ದೇಶಿಸಿತ್ತು.